# ಸಲೂನ್ ಮತ್ತು ಪಾರ್ಲರ್ ಗಳಿಗೆ ಮಾರ್ಗಸೂಚಿಗಳು

## ಸಲೂನ್‌ಗಳು ಮತ್ತು ಪಾರ್ಲರ್‌ಗಳು ಅನುಸರಿಸಬೇಕಾದ ಯಾವುದದರು ನಿಯಮಗಳಿವೆಯೇ?

ಇವೆ

ಈ ಕೆಳಗಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಸಲೂನ್‌ಗಳು ಮತ್ತು ಪಾರ್ಲರ್‌ಗಳು ಕಾರ್ಯನಿರ್ವಹಿಸಬಹುದು:

1. ಜ್ವರ, ಶೀತ, ಕೆಮ್ಮು ಮತ್ತು ಗಂಟಲು ನೋವು ಇರುವ ವ್ಯಕ್ತಿಯನ್ನು ಒಳಗೆ ಅನುಮತಿಸಬಾರದು.
2. ಮುಖಗವುಸುಗಳು ಇಲ್ಲದ ವ್ಯಕ್ತಿಗಳನ್ನು (ಗ್ರಾಹಕರು ಮತ್ತು ಸಿಬ್ಬಂದಿ) ಒಳಗೆ ಅನುಮತಿಸುವಂತಿಲ್ಲ.
3. ಪ್ರವೇಶದಲ್ಲಿ ಹ್ಯಾಂಡ್‌ಸ್ಯಾನಿಟೈಸರ್ ಇಟ್ಟಿರಬೇಕು.
4. ಎಲ್ಲಾ ಸಿಬ್ಬಂದಿಗಳು ಎಲ್ಲಾ ಸಮಯದಲ್ಲೂ ಮತ್ತು ಕಡ್ಡಾಯವಾಗಿ ಫೇಸ್ ಮಾಸ್ಕ್, ಹೆಡ್ ಕವರ್ ಮತ್ತು ಏಪ್ರನ್ ಧರಿಸಬೇಕು
5. ಪ್ರತಿ ಗ್ರಾಹಕರಿಗೂ ಬಿಸಾಡಬಹುದಾದ ಟವೆಲ್ / ಪೇಪರ್ ಶೀಟ್‌ಅನ್ನು ಬಳಸಲಾಗುತ್ತದೆ
6. ಗ್ರಾಹಕರಿಗೆ ಪ್ರತಿ ಬಳಕೆಯ ನಂತರ 7% ಲೈಸೋಲ್ ಅನ್ನು ಬಳಸಿ ಬಳಸಿದ ಎಲ್ಲಾ ಸಾಧನಗಳನ್ನು 30 ನಿಮಿಷಗಳ ಕಾಲ ಸ್ವಚ್ಛಗೊಳಿಸಬೇಕು. ಒಂದು ಸೆಟ್ ಸ್ವಚ್ಛಗೊಳಿಸುವಾಗ ಮತ್ತು ಇನ್ನೊಂದನ್ನು ಬಳಸಲು ಅನೇಕ ಸೆಟ್‌ಗಳನ್ನು ಹೊಂದಲು ಸೂಚಿಸಲಾಗಿದೆ.
7. ಪ್ರತಿ ಕ್ಷೌರದ ನಂತರವೂ ಸಿಬ್ಬಂದಿ ತಮ್ಮ ಕೈಗಳನ್ನು ಸ್ವಚ್ಛಗೊಳಿಸಬೇಕು.
8. ಗ್ರಾಹಕರ ದಟ್ಟಣೆ ತಪ್ಪಿಸಲು ಬೇಟಿವ್ಯವಸ್ಥೆ ಅಥವಾ ಟೋಕನ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು
9. ಆಸನಕ್ಕಾಗಿ ಸಾಕಷ್ಟು ಅಂತರವನ್ನು (ಕನಿಷ್ಠ 1 ಮೀಟರ್) ನಿರ್ವಹಿಸಬೇಕು
10. ಎಲ್ಲಾ ಸಾಮಾನ್ಯ ಪ್ರದೇಶಗಳು, ಮಹಡಿಗಳು, ಲಿಫ್ಟ್‌ಗಳು, ಕೋಣೆ / ಪ್ರದೇಶ, ಮೆಟ್ಟಿಲುಗಳು ಮತ್ತು ಹ್ಯಾಂಡ್ರೈಲ್‌ಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಿಂದ ಸೋಂಕುರಹಿತಗೊಳಿಸಬೇಕು (ಕನಿಷ್ಠ ಎರಡು ಬಾರಿ ಪ್ರತಿದಿನ)
11. ನೆಲಹಾಸುಗಳು ಮತ್ತು ನೆಲವನ್ನು ಆಗಾಗ್ಗೆ ಸ್ವಚ್ಛಗೊಳಿಸಬೇಕು
12. ಬ್ಲೇಡ್‌ಗಳು, ಬಿಸಾಡಬಹುದಾದ ರೇಜರ್‌ಗಳು ಇತ್ಯಾದಿಗಳನ್ನು ಒಳಗೊಂಡಿರುವ ತೀಕ್ಷ್ಣವಾದ ತ್ಯಾಜ್ಯವನ್ನು ಪಂಕ್ಚರ್ ಪ್ರೂಫ್, ಲೀಕ್ ಪ್ರೂಫ್ ವೈಟ್ ಕಂಟೇನರ್‌ನಲ್ಲಿ 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಲ್ಲಿ ಸಂಗ್ರಹಿಸಬೇಕು.
13. 3/4 ತುಂಬಿದ ತ್ಯಾಜ್ಯ ಕಂಟೇನರ್ ಬಯೋಮೆಡಿಕಲ್ ತ್ಯಾಜ್ಯ ವಿಲೇವಾರಿ ಸಂಸ್ಥೆಗೆ ಹಸ್ತಾಂತರಿಸಬೇಕು
14. ಪಾರ್ಲರ್ ಪ್ರವೇಶದ್ವಾರದಲ್ಲಿ ಕೆಮ್ಮುವ ಶಿಷ್ಟಾಚಾರ ಮತ್ತು ಸಾಮಾಜಿಕ ಅಂತರದ ಬಗ್ಗೆ ಪ್ರದರ್ಶನ ಪೋಸ್ಟರ್‌ಗಳನ್ನು ಅಂಟಿಸಬೇಕು.
15. ಯಾವುದೇ ಉದ್ಯೋಗಿಯು ಕೋವಿಡ್-19 ರೋಗ ಲಕ್ಷಣ ಹೊಂದಿರುವುದು ಕಂಡುಬಂದಲ್ಲಿ, ಅವರನ್ನು ತಕ್ಷಣ ಜ್ವರ ಚಿಕಿತ್ಸಾಲಯಕ್ಕೆ ಅಥವಾ ಆಪ್ತಮಿತ್ರ ಸಹಾಯವಾಣಿ 14410 ಗೆ ಕರೆ ಮಾಡಲು ಸೂಚಿಸಬೇಕು. ಸಂಪೂರ್ಣ ಚೇತರಿಕೆಯಾಗುವವರೆಗೆ ಕೆಲಸದ ಆವರಣಕ್ಕೆ ಪ್ರವೇಶಿಸುವುದನ್ನು ನಿಷೇಧಿಸುವುದು.

## ನಾನು ಈಗ ಸಲೂನ್ ಅಥವಾ ಬ್ಯೂಟಿ ಪಾರ್ಲರ್‌ಗೆ ಭೇಟಿ ನೀಡಬಹುದೇ?

ಹೌದು, ಸಲೂನ್ಸ್ ಮತ್ತು ಪಾರ್ಲರ್‌ಗಳಿಗೆ ಭೇಟಿ ಮಾಡಬಹುದು ಆದರೆ ನೀವು ಈ ಕೆಳಗಿನವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು:

1. ನಿಮಗೆ ಜ್ವರ, ಶೀತ, ಕೆಮ್ಮು ಮತ್ತು ಗಂಟಲು ನೋವು ಇದ್ದರೆ, ನೀವು ಸಲೂನ್ ಅಥವಾ ಬ್ಯೂಟಿ ಪಾರ್ಲರ್‌ಗೆ ಭೇಟಿ ನೀಡಬಾರದು.

2. ಸಲೂನ್ ಅಥವಾ ಪಾರ್ಲರ್‌ಗೆ ಭೇಟಿ ನೀಡುವಾಗ ನೀವು ಮುಖಗವುಸು ಧರಿಸಬೇಕು.